# ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.

ಸಿ.ಸಿ. ನಂ- 3021/2021

PW-1

ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ.ಎಮ್.ಎಸ್.ಜೆ. ವಕೀಲರಿಂದ-** ಗುರಪ್ಪ ರಾಯಪ್ಪ ಹೆಗಡೆ ನನ್ನ ತಂಗಿಯ ಗಂಡ ಆಗಬೇಕು. ಗುರಪ್ಪ ರಾಯಪ್ಪ ಹೆಗಡೆ ಇವರಿಗೆ ಸಂಬಂಧಿಸಿದ ಒಂದು ಪ್ರಕರಣ ಈ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ಆರೋಪಿಯ ವಿರುದ್ಧವಾಗಿ ಗುರಪ್ಪ ರಾಯಪ್ಪ ಹೆಗಡೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಂಗಿ ಹಾಗೂ ಗುರಪ್ಪ ರಾಯಪ್ಪ ಹೆಗಡೆ ಇವರ ಮದುವೆ ಯಾವಾಗ ಆಯಿತು ನೆನಪಿಲ್ಲ. ಈ ದಿನ ಗುರಪ್ಪ ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಬಂದಿದ್ದರು ಅವರು ತಮ್ಮ ಪ್ರಕರಣ ಮುಗಿಸಿಕೊಂಡು ಹೋಗಿದ್ದಾರೆ. ಆರೋಪಿ ತನ್ನ ಅಣ್ಣನ ಮಗನ ಮದುವೆ ಇದೆ ಎಂದು ಹಣ ತೆಗೆದುಕೊಂಡು ಹೋಗಿದ್ದರು. ಹಣ ತೆಗೆದುಕೊಂಡು ಹೋಗಲು ಆರೋಪಿ ಒಬ್ಬರೇ ಬಂದಿದ್ದರು. ಆರೋಪಿ ಜೂನ್ 2020 ರಲ್ಲಿ ನನ್ನಿಂದ ಜಮಖಂಡಿಗೆ ಬಂದು ಹಣ ಪಡೆದಿದ್ದ. ಆರೋಪಿ ನನಗೆ ಕರೆ ಮಾಡಿ ಜಮಖಂಡಿಗೆ ಬರಲು ಹೇಳಿದ್ದರು. ಜಮಖಂಡಿಗೆ ಬಂದ ನಂತರ ಹಣ ಪಡೆದಿರುತ್ತಾರೆ. ಆರೋಪಿ ನನಗೆ ಕರೆ ಮಾಡಿ ಜಮಖಂಡಿಯಲ್ಲಿ ಕರೆಸಿದ ವಿಷಯವನ್ನು ನಾನು ವಕೀಲರಿಗೆ ತಿಳಿಸಿಲ್ಲ.

ಗುರಪ್ಪ ರಾಯಪ್ಪ ಹೆಗಡೆ ಇವರಿಗೆ ಟ್ರ್ಯಾಕ್ಟರ ಇದೆ ಎಂದರೆ ಗೊತ್ತಿಲ್ಲ. ಅವರು ಫ್ಯಾಕ್ಟರಿಗೆ ಕಬ್ಬು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ರೂ.6,00,000/- ಹಣ ನನ್ನಿಂದ ಪಡೆದಿರುತ್ತಾರೆ. ಹಣವನ್ನು ನಗದು ರೂಪದಲ್ಲಿ ಪಡೆದಿರುತ್ತಾರೆ. ರೂ.2,00,000/- ಹಣ ನನ್ನ ಮನೆಯಲ್ಲಿ ಇತ್ತು. ಉಳಿದ ರೂ.4,00,000/- ಹಣ ಕುರಿ ಮಾರಾಟದಿಂದ ಬಂದಿತ್ತು. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ರೂ.6,00,000/- ಹಣದ ಭದ್ರತೆಗಾಗಿ ಆರೋಪಿ ಕಡೆಯಿಂದ ಯಾವುದೇ ಕಾಗದ ಪತ್ರವನ್ನು ಬರೆಸಿಕೊಂಡಿರಲಿಲ್ಲ. ಆರೋಪಿಗೆ ಹಣ ನೀಡುವ ಸಮಯದಲ್ಲಿ ನಮ್ಮ ಊರಿನ ಹಿರಿಯರ ಇದ್ದರು. ಅವರ ಸಾಕ್ಷ್ಯ ಮಾಡಿಸುತ್ತೇನೆ. ರೂ.6,00,000/- ಹಣದ ಮುಖಬೆಲೆ ರೂ.500/- ಇತ್ತು. ಆರೋಪಿಗೆ ಹಣ ನೀಡುವ 8-10 ದಿನಗಳ ಮುಂಚೆ ರೂ.2,00,000/- ಹಣ ಬ್ಯಾಂಕಿನಿಂದ ತೆಗೆದುಕೊಂಡು ಬಂದು ಮನೆಯಲ್ಲಿ ಇಟ್ಟಿದ್ದೆ. ಆರೋಪಿಗೆ ಹಣ ನೀಡುವ ಮೊದಲೇ ಮನೆಯಲ್ಲಿ ತಂದು ಇಟ್ಟಿದ್ದೆ. ಆರೋಪಿಗೆ ಯಾವುದೇ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿ ಕಡೆಯಿಂದ ಹಣದ ಭದ್ರತೆಗಾಗಿ ಯಾವುದೇ ಕಾಗದ ಪತ್ರ ಬರೆಸಿಕೊಂಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಚೆಕ್ಕನ್ನು ನನ್ನ

ತಂಗಿಯ ಗಂಡ ಗುರಪ್ಪನ ಕೈಯಿಂದ ತೆಗೆದುಕೊಂಡು ಬಂದು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ನಡುವೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವ ಕಾಲಕ್ಕೂ ಚೆಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಯ ಗಂಡನ ಮಾತು ಕೇಳಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನನಡುವೆ ಯಾವುದೇ ವ್ಯವಹಾರ ಇಲ್ಲದೇ ಇದ್ದರೂ ಸಹ ಆರೋಪಿ ವಿರುದ್ಧ ಖೊಟ್ಟಿ ಪ್ರಕರಣ ದಾಖಲಿಸಿದ್ದೇನೆಂದರೆಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು ಜಮಖಂಡಿ.